**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC.30/2020**

| | | |
|---|---|---|
| ಸಾಕ್ಷಿದಾರರ ಹೆಸರು | : | ಹನಮಗೌಡ |
| ತಂದೆಯ/ಗಂಡನ ಹೆಸರು | : | ಶಂಕ್ರಪ್ಪ |
| ವಯಸ್ಸು | : | 41 ವರ್ಷ |
| ಉದ್ಯೋಗ | : | ಉಕ್ಕಡಗಾತ್ರಿ ದೇವಸ್ಥಾನದಲ್ಲೆ, ಮ್ಯಾನೇಜರ್ |
| ವಾಸ ಸ್ಥಳ | : | ಹೊಸಪಾಳ್ಯ ಗ್ರಾಮ, ಹರಿಹರ ತಾಲ್ಲೂಕು |

ಪಿ.ಡಬ್ಲ್ಯೂ 6

ಸಿ.ಡಬ್ಲ್ಯೂ 8

ದಿ: 18-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ಚಾಸಾ- 7 ನಮ್ಮೊಂದಿಗೆ ಉಕ್ಕಡಗಾತ್ರಿ ದೇವಸ್ಥಾನದಲ್ಲಿ ಕೆಲಸ ಮಾಡುತ್ತಿರುತ್ತಾರೆ. ಈಗ ನನಗೆ ತೋರಿಸಿದ ಒಂದು ಪೋಟೋ ಉಕ್ಕಡಗಾತ್ರಿ ದೇವಸ್ಥಾನದ ಬಳಿ ಇರುವ ತುಂಗಭದ್ರ ನದಿ ಸಮೀಪ ತೆಗೆದಿದ್ದು ಇರುತ್ತದೆ ಸದರಿ ಸದರಿ ಪೋಟೋವನ್ನು ನಾನು ನೋಡಿ ಗುರುತಿಸುತ್ತೇನೆ ಅದನ್ನು ನಿ.ಪಿ.- 13 ಎಂದು ಗುರುತಿಸಲಾಯಿಟು ಸದರಿ ಪೋಟೋದಲ್ಲಿ ನಾನು ಮತ್ತು ಚಾಸಾ-7 ಕಾಣುತ್ತೇವೆ. ಸದರಿ ಪೋಟೋದಲ್ಲಿ ಆರೋಪಿ ಸಹ ಇರುತ್ತಾರೆ. ಆ ದಿನ ಮಹಜರು ಮಾಡುವ ಕಾಲಕ್ಕೆ ಆರೋಪಿಯನ್ನು ನೋಡಿದ್ದೆ. ದೂರುದಾರರು ತನ್ನ ಕತ್ತಿನಲ್ಲಿ ಇದ್ದ ಚೈನನ್ನು ಕಿತ್ತುಕೊಂಡು ಹೋದ ಸ್ಥಳ ಅಂತ ಹೇಳಿರುತ್ತಾರೆ. ಆ ಸ್ಥಳ ದಲ್ಲಿ ಪೋಲೀಸರು ಮಹಜರು ಮಾಡಿರುತ್ತಾರೆ, ಸದರಿ ಮಹಜರನ್ನು ನಾನು ನೋಡುತ್ತಿದ್ದುಅದನ್ನು ನಿ.ಪಿ.- 14 ಎಂದು ಅದರಲ್ಲಿನ ನನ್ನ ಸಹಿಯನ್ನು ನಿ.ಪಿ.- 14(ಎ) ಎಂದು ಗುರುತಿಸಲಾಯಿತು. ಆ

ಮಹಜರನ್ನು ಮದ್ಯಾಹ್ನ 1-00 ಗಂಟೆಯಿಂದ 1-45 ರ ವರಗೆ ಮಾಡಿದರು. ಪೋಲೀಸರು ನನಗೆ ಮಹಜರಿಗೆ ಬರಲು ನೋಟೀಸು ನೀಡಿರುತ್ತಾರೇ, ಸದರಿ ನೋಟೀಸನ್ನು ನಿ.ಪಿ.- 15 ಎಂದು ಅದರಲ್ಲಿನ ನನ್ನ ಸಹಿಯನ್ನು ನಿ.ಪಿ.- 15 (ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಶ್ರೀ .HSY , ವಕೀಲರಿಂದ ಆರೋಪಿತರ ಪರವಾಗಿ</u>**:

2. ನಾನು ಉಕ್ಕಡಗಾತ್ರಿ ದೇವಸ್ಥಾನದಲ್ಲಿ ರೂಂ ಕೊಡುವ ಮ್ಯಾನೇಜರ್ ಆಗಿರುತ್ತೇ ನೆ. ಉಕ್ಕಡಗಾತ್ರಿ ದೇವಸ್ಥಾನದಲ್ಲಿ ಅಮವಾಸ್ಯೆ ದಿನ ಸಾಕಷ್ಟು ಜನರ ಆಗಮನ ಇರುತ್ತದೆ ಎಂದರೆ ಸರಿ. ನಮ್ಮ ಕಟ್ಟಡದಲ್ಲಿರುವ ಎಲ್ಲಾ ಕೊಠಡಿಗಳು ತುಂಬಿರುತ್ತದೆ ಎಂದರೆ ಸರಿ. ದೂರುದಾರರು ನಮ್ಮಲ್ಲಿ ಆ ದಿನ ಏನೂ ರೂಂ ಮಾಡಿರಲಿಲ್ಲ. ಉಕ್ಕಡಗಾತ್ರಿ ದೇವಸ್ಥಾನದಲ್ಲಿ ಒಂದು ಪೋಲೀಸ್ ಚೌಕಿ ಇದೆ ಎಂದರೆ ನಿಜ. ಅಮವಾಸ್ಯೆ ದಿನ ಸಾಕಷ್ಟು ಜನ ಬರುವುದರಿಂದ ಸಾಕಷ್ಟು ಪೊಲೀಸರು ಗಸ್ತು ಮಾಡುತ್ತಿರುತ್ತಾರೆ ಎಂದರೆ ನಿಜ. ಅದೇ ರೀತಿ ಪೋಲೀಸರು ಅಲ್ಲಿ ಕಳ್ಳರು ಇರುತ್ತಾರೆ ಅಂತ ಪ್ರಕಟಣೆ ಮಾಡುತ್ತಾ ಇರುತ್ತಾರೆ ಎಂದರೆ ನಿಜ. ನಿ.ಪಿ.- 13 ಪೊಟೋ ವನ್ನು ದಿನಾಂಕ 16-08-2019 ರಂದು ತೆಗೆದಿರುತ್ತಾರೆ.ಪೋಲೀಸರು ನನಗೆ ಆ ಸಮಯದಲ್ಲಿ ನೋಟೀಸು ನೀಡಿಲ್ಲ. ಪೋಲೀಸರು ನಿಂತಿಕೊಳ್ಳಲು ಹೇಳಿದ್ದರಿಂದ ನಾನು ಪೋಟೋಗೆ ನಿಂತೆನು. ಮಹಜರಿಗೆ ಯಾರು ಮಾಹಿತಿ ನೀಡಿದರು ನನಗೆ ಮಾಹಿತಿ ಇಲ್ಲ. ಪೋಲೀಸರು ನನ್ನ ಸಾಕ್ಷಿ ಬೇಕು ಎಂದು ನನ್ನ ಪೋಟೋ ತೆಗೆದರು. ಮಹಜರಿನಲ್ಲಿ ಏನು ಬರೆದಿದೆ ಅಂತ ನನಗೆ ಮಾಹಿತಿ ಇಲ್ಲ. ದೇವಸ್ಥಾನಕಲ್ಲಿ ನಾನು ಕೆಲಸ ಮಾಡುತ್ತಿದ್ದರಿಂದ ಪೋಲೀಸರು ಅಲ್ಲಿ ಸಹಿ ಮಾಡಲು ಹೇಳಿದ್ದರಿಂದ ನಾನು ಸಹಿ ಮಾಡಿದೆನು.

3. ಆ ದಿನ ತುಂಗಭದ್ರ ನದಿ ತುಂಬಿತ್ತು. ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲದಿದ್ದರೂ ಪೋಲೀಸರು ಈ ರೀತಿ ಸಾಕ್ಷಿ ಹೇಳು ಎಂದು ಹೇಳಿದಕ್ಕೆ ಅದರಂತೆ ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.